

# ಪ್ರಜೆಗಳ ಸದೃಢ ಆರೋಗ್ಯ ದೇಶದ ಬುನಾದಿ

## ಬಳ್ಳಾರಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಅಭಿಮತ

ಸಂಡೂರು ತಾಲೂಕು ಸುಲ್ತಾನಪುರದಲ್ಲಿ ಮೇ.ಮಿನೇರಾ ಸ್ಟೀಲ್ ಮತ್ತು ಪವರ್ ಪ್ರೈ.ಲಿ. ಮತ್ತು ಜಿಲ್ಲಾ ಆರೋಗ್ಯ ಇಲಾಖೆಯಿಂದ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಸೋಮಶೇಖರ್ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಸಂಡೂರು

ಪ್ರತಿಯೊಬ್ಬರೂ ಆರೋಗ್ಯ ಹೊಂದಬೇಕು. ಆರೋಗ್ಯವಂತರಿಂದ ಮಾತ್ರ ಸದೃಢ ದೇಶ ಕಟ್ಟಲು ಸಾಧ್ಯ ಎಂದು ಬಳ್ಳಾರಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಸೋಮಶೇಖರ್ ಹೇಳಿದರು.

ಸಂಡೂರು ತಾಲೂಕು ತೋರಣಗಲ್ ಹೋಬಳಿ ಸುಲ್ತಾನಪುರದಲ್ಲಿ ಮೇ.ಮಿನೇರಾ ಸ್ಟೀಲ್ ಮತ್ತು ಪವರ್ ಪ್ರೈ.ಲಿ. ಮತ್ತು ಜಿಲ್ಲಾ ಆರೋಗ್ಯ ಇಲಾಖೆಯಿಂದ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ದೇಶಿಸಿ ಮಾತನಾಡಿದರು.

ಸಂಡೂರು ತಾಲೂಕಿನಲ್ಲಿ ಕಬ್ಬಿಣದ ನಿಕ್ಷೇಪಗಳು ಹೆಚ್ಚಿರುವುದರಿಂದ ಇದಕ್ಕೆ ಸಂಬಂಧಿಸಿದ ಕಾರ್ಖಾನೆಗಳು ಹೆಚ್ಚುತ್ತಿವೆ. ಇಂತಹ ಕೈಗಾರಿಕೆಗಳಿಂದ ಹೆಚ್ಚು ಅನುಕೂಲಗಳು ಹಾಗೂ ಅನಾನುಕೂಲಗಳಿವೆ. ನಾವು ಅನುಕೂಲಗಳನ್ನು ಹೆಚ್ಚು ಆಯ್ಕೆ ಮಾಡಿಕೊಳ್ಳಬೇಕು. ಹಾಗೂ ಅನಾನುಕೂಲಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಬೇಕು. ಮಿನೇರಾ ಕಂಪನಿ ಸುಮಾರು 20 ವರ್ಷಗಳ ಹಳೆಯದಾಗಿದ್ದು, ಕಂಪನಿಯ ಆಡಳಿತ ಮಂಡಳಿ ಮಾನವೀಯತೆಯ ತಳಹದಿಯ ಮೇಲೆ ಅತ್ಯುತ್ತಮ ಕೆಲಸ ಮಾಡುತ್ತಿದೆ ಎಂದರು. ಈ ದಿನದ ಶಿಬಿರಕ್ಕೆ ನೇತ್ರ, ಮಹಿಳೆ ಮತ್ತು ಮಕ್ಕಳು, ಸಾಮಾನ್ಯ ತಜ್ಞರು ಆಗಮಿಸಿದ್ದು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಈ ಶಿಬಿರದಲ್ಲಿ ಮಿನೇರಾ ಸ್ಟೀಲ್‌ನ ನಿರ್ದೇಶಕ ಟಿ. ಹನುಮಂತರೆಡ್ಡಿ, ಉಪಾಧ್ಯಕ್ಷರಾದ ನಿತೀಶ್‌ಕುಮಾರ್, ಮುಖ್ಯ ಪ್ರದಾನ ವ್ಯವಸ್ಥಾಪಕ ವೀರೇಶ ಬಾಬು, ಪ್ರಧಾನ ವ್ಯವಸ್ಥಾಪಕರಾದ ಕುಲಕರ್ಣಿ, ಕೋಟೇಶ್ವರರಾವ್, ಲೆಕ್ಕಪತ್ರ ವಿಭಾಗದ ಲಕ್ಷ್ಮೀ ನಾರಾಯಣರೆಡ್ಡಿ, ದಿನೇಶ್ ರೆಡ್ಡಿ, ಪಿಆರ್‌ಒ ಚಂದ್ರಶೇಖರ್, ತಜ್ಞ ವೈದ್ಯರಾದ ಡಾ.ಶ್ರೀಧರ್, ಸ್ತ್ರೀರೋಗ ತಜ್ಞೆ ಡಾ. ರೇಖಾ, ಮೂಳೆ ತಜ್ಞ ಡಾ. ಲಕ್ಷ್ಮೀಕಾಂತರೆಡ್ಡಿ, ನೇತ್ರ ತಜ್ಞೆ ಡಾ. ಸಿಂಧೂರರೆಡ್ಡಿ, ಮಕ್ಕಳ ತಜ್ಞ ಡಾ. ರಘುವಂಶಿ, ಚೈತ್ರಾ, ರೆಡ್ಡಿ ಶಿಬಿರಾರ್ಥಿಗಳನ್ನು ತಪಾಸಣೆ ನಡೆಸಿದರು.

ಗ್ರಾ.ಪಂ ಮಾಜಿ ಉಪಾಧ್ಯಕ್ಷರಾದ ಗೋವಿಂದರೆಡ್ಡಿ, ಶಾಲೆ ಮುಖ್ಯ ಶಿಕ್ಷಕ ಉಮಾಪತಿ, ಎಸ್‌ಡಿಎಂಸಿ ಅಧ್ಯಕ್ಷ ಹುಲುಗಪ್ಪ ಮತ್ತಿತರರು ಭಾಗವಹಿಸಿದ್ದರು. ಶಿಬಿರದಲ್ಲಿ ಜನರಲ್ 62, ನೇತ್ರ 17, ಮಕ್ಕಳು 44, ಸ್ತ್ರೀರೋಗ 40, ಮೂಳೆ 44 ಸೇರಿ ಒಟ್ಟು 207 ಜನ ಉಚಿತ ತಪಾಸಣೆಗೊಳಗಾದರು. ಉಚಿತ ಔಷಧಿ ಮತ್ತು ಕನ್ನಡಕಗಳನ್ನು ವಿತರಿಸಲಾಯಿತು.

# The sound health of citizens is the foundation of a country.

On Wed, 18 May 2022

Somshekhar, Joint Director of the District Industrial Centre, inaugurated a free health check-up camp organized by M/s. Minera Steel and Power Private Limited and the District Health Department in Sultanpur, Sandur taluk.

Somashekar, Joint Director of the Bellary District Industrial Centre, said that everyone should be healthy. Only healthy people can build a strong country.

Due to the high iron deposits in Sandur taluk, the number of factories related to this is increasing. There are many advantages and disadvantages of such industries. We should choose the advantages more and take steps

to correct the disadvantages. Minera Company is about 20 years old, and the company's management is doing excellent work for society. He said that ophthalmologists, women and children, and general specialists have come to this day's camp and that they should take advantage of it.

In this camp, M/s. Minera Steel and Power Private Limited, Director T. Hanumantha Reddy, Vice President Girish Kumar, Chief General Manager Veeresh Babu, General Managers Kulkarni, Koteshwara Rao, Accounting Department Lakshmi Narayan Reddy, Dinesh Reddy, PRO Chandrashekhar, Specialist Doctors Dr. Sridhar, Gynecologist Dr. Rekha, Orthopedic Specialist Dr. Lakshmi Kanthareddy, Ophthalmologist Dr. Sindhur Reddy, Pediatrician Dr. Raghuvanshi, Chaitra Reddy examined the campers.

Former Gram Panchayat Vice President Govinda Reddy, School Headmaster Umapathy, SDMC President Hulugappa and others participated. A total of 207 people including 62 general, 17 ophthalmologists, 44 children, 40 gynecologists, and 44 orthopedics underwent free check-ups in the camp. Free medicines and glasses were distributed.